1369 (1376) ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಸದಲಗ) :– ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸದಲಗಾ ಮತಕ್ಷೇತ್ರ ವ್ಯಾಪ್ತಿಯ ಬಾರವಾಡ ಗ್ರಾಮದ ಏತ ನೀರಾವರಿ ಯೋಜನೆಗೆ ಸರ್ಕಾರ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿಯನ್ನು ನೀಡಿದ್ದು ಯಾವಾಗ;

ಆ) ಹಾಗಿದ್ದಲ್ಲಿ ಕಾಮಗಾರಿಯ ಪ್ರಗತಿ ಈಗ ಯಾವ ಹಂತದಲಿದೆ;

ಇ) ಕಾಮಗಾರಿಯನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು?

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು) :

ಅ) ಈ ಏತ ನೀರಾವರಿ ಯೋಜನೆಯನ್ನು ಸಣ್ಣ ನೀರಾವರಿ ಇಲಾಖೆಯು ಕೈಗೊಂಡಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

1370 (2031) ಶ್ರೀ ರಮೇಶ್ ಕುಮಾರ್ ಕೆ. ಆರ್. (ಶ್ರೀನಿವಾಸಪುರ):– ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾರಾಯಿ ಮಾರಾಟ ನಿಷೇಧವನ್ನು ಯಾವ ತಾರೀಖಿನಿಂದ ಜಾರಿಗೆ ತರಲಾಗುವುದು ಹಿಂದಿನ ಆರ್ಥಿಕ ವರ್ಷದಲ್ಲಿ ಸಾರಾಯಿ ಮಾರಾಟದಿಂದ ಸರ್ಕಾರಕ್ಕೆ ಬಂದ ವರಮಾನ ಎಷ್ಟು;

ಆ) ಇದರ ಜೊತೆಗೆ ರಾಜ್ಯದಲ್ಲಿ ಇತರೆ ಎಲ್ಲಾ ಮೂಲಗಳಿಂದ ಉತ್ಪಾದನೆಯಾಗುವ ಮದ್ಯಪಾನ ನಿಷೇಧಿಸಲು ಸರ್ಕಾರ ಆಲೋಚಿಸಿದೆಯೇ?